100 Years Celebrations 1916-2016

# UNIVERSITY OF MYSORE
# DEPARTMENT OF STUDIES IN SANSKRIT

On the occasion of Centenary Celebrations

One-Day National Conference on

# Agriculture In Sanskrit Literature




Scanned with OKEN Scanner

Bheemanaik K. S. M.A. (Ph.D)

# AGRICULTURE
# IN
# SANSKRIT LITERATURE

Edited by

**Dr. K. Narayana Bhatta**

Chairman, Department of Studies in Sanskrit,

University of Mysore, Manasagangotri, Mysuru.

Department of Studies in Sanskrit,

University of Mysore, Manasagangotri,

Mysuru, Karnataka.

Scanned with OKEN Scanner

# Agriculture in Sanskrit Literature

@ Author

All rights reserved. No part of this book may be reproduced, stored, adapted or transmitted in any form or by any means, electronic, mechanical, photocopying, micro-filming, recording or otherwise or translated in any language, without the prior written permission of the copyright owner and the publisher. The book is sold subject to the condition that it shall not, by way of trade or otherwise, be lent, resold, hired out, or otherwise circulated without the prior publisher's written consent in any form of binding or cover other than that in which it is published.

The views and opinions expressed in this book is author's own and the facts reported by them have been verified to the extent possible and the publishers are not in any way liable for the same.

**ISBN: 978-81-910230-1-5**

**Price: 1,000/- (One Thousand Rupees)**

**First Published in July 2016.**

Published by:

**Rural Organization for Appropriate Development (R),**

Vinayaka Nagar, Mysuru – 570012.

Email: anthroedit@ymail.com

Printed at: Sri Annapurna Offset Printers, Saraswarthipuram, Mysuru, Karnataka.

| | | | |
|---|---|---|---|
| | Sages And Seers Of Bharat Ancient Legacy - Modern Boon | | |
| 17 | Kautilya's Views on Agriculture as Presented in Arthashastra | Dr. Sumitra V. Bhat | 91 |
| 18 | ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ಕೃಷಿವಿಚಾರ | ವಿದ್ವಾನ್ ತಿಮ್ಮಣ್ಣಆರ್ | 98 |
| 19 | Kautilya's Administration Related To Agriculture | Dr. G.H. Nagaraj | 101 |
| 20 | वेदवाङ्मये कृषिविचारः सोमलता च | Dr. V.Venkatraman Bhatt | 106 |
| 21 | Yoga And Agriculture | Dr K Krishna Sharma & Dr Thirumaleshwara Prasada H | 110 |
| 22 | ಕೌಟಿಲೀಯು ಕೃಷಿ ಪದ್ಧತಿ | ಡಾ. ಸುರೇಶ ಹೆಗಡ | 114 |
| 23 | संस्कृतवाङ्मयस्थानां कृषिसंरक्षणोपायानां साम्प्रतिकत्वम् | उदयनहेगडे | 119 |
| 24 | Vedic Literature And Agriculture | Dr. M.N. Joshi | 124 |
| 25 | ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೃಷಿ ವಿಚಾರಗಳು | ವಿದುಷಿ ಸಾವಿತ್ರಿ ಪೂಜಾರಿ | 130 |
| 26 | कृषेः निर्वहणाध्यक्षः कृषकः | मञ्जुनाथः न हेगडे | 133 |
| 27 | Development of Agriculture in Sanskrit Literature | Nibedita Banerjee | 139 |
| 28 | Agriculture in the Vedic Period | Mr. Loyston Lewis & Mr.Rohit Lewis | 143 |
| 29 | व्याकरणमहाभाष्ये कृषिविचाराः | डा. एस्.शिवराजप्पा & श्रीनिवासः | 147 |
| 30 | Agriculture Rites as Reflected in the Vedic Literature | K. G. Sheshadri | 151 |
| 31 | Agriculture view in Kautilya | K. V. Suryaprakash | 159 |
| 32 | ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ಕೃಷಿ ವಿಚಾರಗಳು | ಭೀಮನಾಯ್ಕ ಎಸ್. | 162 |
| 33 | पूगवाटीशतकसमीक्षा | विद्वान् श्रीकृष्ण भट्टः | 164 |


Scanned with OKEN Scanner

ISBN : 978-81-910230-1-5

# ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ಕೃಷಿ ವಿಚಾರಗಳು

ಭೀಮನಾಯ್ಕ ಎಸ್.

ಸಂಶೋಧನ ವಿದ್ಯಾರ್ಥಿ, ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

beema87naik@gmail.com

---

**ಸಾರಾಂಶ**

ಕೌಟಿಲ್ಯನ ಅರ್ಥಶಾಸ್ತ್ರವು ರಾಜ್ಯ ನಿರ್ಮಾಣಕ್ಕೆ ಬೇಕಾದ ಸೌಲಭ್ಯಗಳು. ರಾಜ್ಯದ ಅಭಿವೃದ್ಧಿ ಕಾರ್ಯದ ದೃಷ್ಟಿಯಿಂದ ರಾಜ್ಯ ರಕ್ಷಣೆ ಹೇಗಿರಬೇಕು. ಸ್ತ್ರೀಯರಿಗೆ ಸಮಾಜದಲ್ಲಿ ಗೌರವ. ಯಜ್ಞಯಾಗಾದಿಗಳಿಗೆ ಸೌಲಭ್ಯ. ಕೃಷಿ ಕಾರ್ಯಗಳಿಗೆ ಉತ್ತೇಜನ ದೊರೆಯುವುದು. ಪ್ರಜೆಗಳ ಉತ್ತಮ ಜೀವನಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡುವುದು. ಪ್ರಜಾರಕ್ಷಣೆಗೆ ಗಮನ ಕೊಡದೆ ಕಂದಾಯ ಮತ್ತು ತೆರಿಗೆಗಳನ್ನು ಮಾತ್ರ ಪಡೆಯುವ ಕಳ್ಳ ಅಧಿಕಾರಿಗಳನ್ನು ದಂಡಿಸುವುದು. ಕೃಷಿಯು ಮನುಷ್ಯನ ಜೀವನಕ್ಕೆ ಅತೀ ಮುಖ್ಯವಾದ ಕಾರ್ಯ, ಕೆರೆ, ನದಿಗಳಿಂದ ಬರುವ ನೀರಿನ ಸವಲತ್ತುಗಳಿಂದ ಕೃಷಿ ಅಭಿವೃದ್ಧಿ ಪಡಿಸುವುದು. ಉತ್ತಮ ಬೀಜಗಳ ಅಭಿವೃದ್ಧಿ ಬಿತ್ತನೆಯಾಗುವ ಕಾಲಮಾನ ಹೇಗಿರಬೇಕು. ಈ ಎಲ್ಲಾ ವಿಷಯಗಳು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬಂದಿರುವ ಕೃಷಿ ವಿಚಾರಗಳನ್ನು ಸಿದ್ದಪಡಿಸಿ ಈ ಲೇಖನವನ್ನು ರಚಿಸಿರುತ್ತೇನೆ.

**ಪೀಠಿಕೆ** : ಕೃಷಿಯು ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಪ್ರಾಚೀನ ಬಾರತದಲ್ಲಿ ಕೃಷಿಯು ಬಹು ಪ್ರಚಾರದ್ಲಲಿದ್ದಿತ್ತು. ಅಲ್ಲಿ ಮಾನವನು ಪ್ರಕೃತಿಯ ಜೊತೆಯಲ್ಲಿ ಬೆರೆತು ಸುಖ ಜೀವನವನ್ನು ಕಳೆಯುತ್ತಿದ್ದನು. ಕೃಷಿ, ಪಶುಪಾಲನೆ, ಕೈಗಾರಿಕೆಗಳನ್ನು ವೃದ್ಧಿಗೊಳಿಸಿ ರಾಜ್ಯವನ್ನು ಸಂಪತ್ತುಭರಿತವಾಗಿ ಮಾಡುವುದು ಹೇಗೆಂಬುದನ್ನು ತಿಳಿಯುವುದು. ಆಡಳಿತದ ರೀತಿ ನೀತಿಗಳನ್ನು ತಿಳಿಸುವುದು ಅರ್ಥಶಾಸ್ತ್ರ, ಸುವ್ಯವಸ್ಥಿತವಾಗಿಯೂ ಸ್ವತಂತ್ರವಾಗಿಯೂ ಇರುವ ರಾಜ್ಯದಲ್ಲಿ ಪ್ರಜೆಗಳನ್ನು ಯಾವ ರೀತಿ ರಕ್ಷಿಸಬೇಕು. ಬಲಿಷ್ಟರು ಬಲಹೀನರನ್ನು ಹಿಂಸಿಸುವುದು ಅದರಿಂದ ಮುಕ್ತಿಗೊಳಿಸುವುದು. ರಾಜನು ಶಕ್ತಿಯನ್ನು ಯಾವ ರೀತಿಯಲ್ಲಿ ಉಪಯೋಗಿಸುವುದು ಯುಕ್ತವಾದುದು. ಯಾವ ರೀತಿಯಲ್ಲಿ ಪ್ರಯೋಗಿಸುವುದು ಆಯುಕ್ತ ಯಾವ ರೀತಿಯಲ್ಲಿ ಆಡಳಿತ ನಡೆಸಿದರೆ ರಾಜ್ಯ ಬಲ ಪಡುವುದು. ಈ ಎಲ್ಲಾ ಅಂಶಗಳನ್ನು ವಿಶ್ಲೇಷಿಸುವುದು. ಧರ್ಮಕ್ಕನುಸಾರವಾಗಿ ಆಯಾ ಜಾತಿಯವರು ತಮ್ಮ ಧರ್ಮವನ್ನು ಕಾಪಾಡಿಕೊಳ್ಳಬೇಕಾದರೆ ಕೃಷಿಯ ಕಾರ್ಯವು ಅತ್ಯವಶ್ಯಕವೆಂಬುದನ್ನು ಕೌಟಿಲ್ಯನು ಅಭಿಪ್ರಾಯವಾಗಿದೆ.

**ಕೃಷಿಯ ಮಹತ್ವ:-** ಒಂದು ರಾಜ್ಯದಲ್ಲಿ ಉತ್ತಮ ಜೀವನಕ್ಕೆ ಬೇಕಾಗುವ ಅನುಕೂಲಗಳು ಒದಗದಿದ್ದಲ್ಲಿ ಜನರು ಆ ರಾಜ್ಯವನ್ನು ತ್ಯಜಿಸಿ ಅನುಕೂಲವಾಗಿರುವ ರಾಜ್ಯಕ್ಕೆ ಹೋಗುವರು. ಕೃಷಿಕರು ಎಲ್ಲರು ಒಂದೇ ಗ್ರಾಮದಲ್ಲಿ ವಾಸಿಸುವಂತಿರಲಿಲ್ಲ. ನೂರಕ್ಕಿಂತ ಕಡಿಮೆಯಾಗದೆ ಐನೂರಕ್ಕಿಂತ ಹೆಚ್ಚಾಗದ ಕುಟುಂಬಗಳು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಎರಡು ಮೈಲು ದೂರವಿರಬೇಕು. ಒಂದು ಗ್ರಾಮದವರು ಮತ್ತೊಂದು ಗ್ರಾಮದವರಿಗೆ ಸಹಾಯ ಮಾಡುವ ಅನುಕೂಲತೆಯುಳ್ಳ ಗ್ರಾಮವನ್ನು ರಚಿಸಬೇಕು. ಗಡಿ, ಪರ್ವತ, ಕಾಡು, ನದಿಗೆ ಕಟ್ಟಿದ ಸೇತುವೆಗಳಿಗೆ ಹೆಚ್ಚು ಕಾಲ ಬಾಳುವ ಶಾಲ್ಮಲೀ ವೃಕ್ಷ, ಶಾಮೀವೃಕ್ಷ, ಆಲದ ಮರದಿಂದ ನಿರ್ಮಿಸಬೇಕು. ಕೃಷಿಗೆ ಯೋಗ್ಯವಾದ ಭೂಮಿಯನ್ನು ಪಡೆದು ಕೊಂಡು ಗದ್ದೆ ಮಾಡುವ ಭೂಮಿಯನ್ನು ಗದ್ದೆಗಾಗಿ ಮಾಡಿಕೊಳ್ಳಬೇಕು. ಜನಸಾಮಾನ್ಯರಿಗೆ ಉಪಯೋಗವಾಗುವ ಹಾಗೆ ತೆರಿಗೆಯನ್ನು ಕಟ್ಟಿಸಿಕೊಳ್ಳುವುದು. ಬೆಳೆ ಮಾಡದಿರುವ ಭೂಮಿಯನ್ನು ಅವರಿಂದ ತೆಗೆದು ಕೃಷಿ ಮಾಡುವವರಿಗೆ ಕೊಡಬೇಕು. ಕೃಷಿ ಮಾಡಲು ಜನರಿಲ್ಲದಿದ್ದರೆ ಗ್ರಾಮಾಧಿಕಾರಿಗಳೂ, ವ್ಯಾಪಾರಿಗಳೂ ಕೃಷಿ ಮಾಡಬೇಕು. ಕೃಷಿ ಮಾಡುವುದಕ್ಕೊಪ್ಪಿಕೊಂಡು ಮಾಡದಿದ್ದರೆ ನಷ್ಟವನ್ನು ಕೊಡಬೇಕು. ಕೃಷಿ ಮಾಡುವವರು ಬಡವರಾದರೆ ಅವರಿಗೆ ಅನುಕೂಲವಾಗುವಂತೆ ಎತ್ತು, ಬಿತ್ತನೆಯ ಬೀಜ, ಬೇಸಾಯದ ಖರ್ಚಿನ ಹಣವನ್ನು ಕೊಡಬೇಕು. ನಂತರ ಕೃಷಿಕರು ತಮಗೆ ಕಷ್ಟವಾಗದ ರೀತಿಯಲ್ಲಿ ಸುಲಭ ಕಂತುಗಳಿಂದ ತೀರಿಸಬೇಕು. ಸೀತಾಧ್ಯಕ್ಷನು ಕೃಷಿಯ ಮೇಲ್ವಿಚಾರಣೆಯನ್ನು ಮಾಡುವ ಅಧಿಕಾರಿ. ಇವರು ಕೃಷಿಶಾಸ್ತ್ರ, ಭೂಮಿಯ ಸಾರವನ್ನು ತಿಳಿಸುವ ಶುಲ್ಬಶಾಸ್ತ್ರ, ವೃಕ್ಷಾಯುರ್ವೇದ ಈ ಶಾಸ್ತ್ರಗಳನ್ನು ಬಲ್ಲವನಾಗಿರಬೇಕು. ಎಲ್ಲಾ ವಿಧಧ ಧಾನ್ಯಗಳು ಫಲ ಪುಷ್ಪಗಳು, ತರಕಾರಿಗಳು ಗಡ್ಡೆ ಗೆಣಸುಗಳು ಬಳ್ಳಿಯಲ್ಲಿ ಬೆಳೆಯುವ ತರಕಾರಿಗಳು ಬಲ್ಲವನಾಗಿರಬೇಕು. ತರಕಾರಿಯ ಬೀಜಗಳನ್ನು ಯೋಗ್ಯ ಸಮಯದಲ್ಲಿ ಸಂಗ್ರಹಿಸಬೇಕು. ಯಾವ ಯಾವ ಕಾಲಕ್ಕೆ ಯಾವ ಬೀಜಗಳನ್ನು ಬಿತ್ತಿದರೆ ಉತ್ತಮ ಬೆಳೆ ಬರುವುದೆಂಬುದರ ಬಗ್ಗೆ ಚೆನ್ನಾಗಿ ಬಲ್ಲವನಾಗಿರಬೇಕು. ಕೃಷಿ ಕಾರ್ಯ



Scanned with OKEN Scanner

ISBN : 978-81-910230-1-5

ಮಾಡುವವರು ಕೆಲವು ಅಡೆತಡೆಗಳನ್ನು ನಿರ್ವಹಿಸುವುದು. ಕೃಷಿ ಉಪಕರಣಗಳು ಎತ್ತುಗಳು ಕೆಲಸಗಳಿಗೆ ತಡೆಯುಂಟಾಗಬಾರದು ಮತ್ತು ಕಮ್ಮಾರರು, ಬಡಗಿಗಳು, ಅಗೆಯುವವರು, ಹಗ್ಗ ಮಾಡುವವರು, ಕೃಷಿ ಕಾರ್ಯದ ಸಂಧರ್ಭದಲ್ಲಿ ತೊಂದರೆ ಮಾಡಬಾರದು. ಮಳೆಗಾಲದ ವಾತಾವರಣವನ್ನು ಅರಿತು ಕೃಷಿ ಕಾರ್ಯಕ್ಕೆ ಬೇಕಾದ ಕೃಷಿ ಸಾಮಾಗ್ರಿಗಳು – ಗೊಬ್ಬರ ಮಣ್ಣಿನ ಸಾವಳಿಯನ್ನು ಅರಿತುಕೊಳ್ಳಬೇಕು. ಈ ರೀತಿ ಮಳೆಯ ಪ್ರಮಾಣವನ್ನು ತಿಳಿದು ಚೆನ್ನಾಗಿ ಮಳೆ ಬರುವ ಕಡೆಗಳಲ್ಲಿ ಹೆಚ್ಚು ನೀರು ಬೇಕಾದ ಬೆಳೆಯನ್ನು ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ನೀರು ಕಡಿಮೆ ಸಾಕಾಗುವ ಬೆಳೆಯನ್ನು ಬೆಳೆಸಬೇಕು. ಮೊದಲ ಮಳೆಗೆ ಬಿತ್ತುವ ದಾನ್ಯಗಳು, ಗಂದಸಾಲೆ, ಭತ್ತ, ಕೊದ್ರವ, ಎಳ್ಳು, ಪ್ರಿಯಂಗು, ದಾರಕ, ವರಕ ಇವು ಏಳು ಧಾನ್ಯಗಳು ಮೊದಲು ಬಿತ್ತಬೇಕು. ಎರಡನೆಯದಾಗಿ ಹೆಸರು, ಉದ್ದು ಮತ್ತು ಶೈಂಬ್ಯಗಳನ್ನು ಬಿತ್ತಬೇಕು. ಕುಸುಂಭ, ಮಸೂರ, ಕುಲುತ್ತ, ಯವ, ಗೋಧಿ ಅಗಸೆ, ಸಾಸಿವೆ ಇವುಗಳು ಕಡೆಯದಾಗಿ ಬಿತ್ತಬೇಕು. ಇನ್ನುಳಿದ ಬೀಜಗಳನ್ನು ಸಮೃದ್ಧವಾಗಿ ಬೆಳೆಯುವ ಕಾಲದಲ್ಲಿ ಬಿತ್ತಬೇಕು. ಸೀತಾಧ್ಯಕ್ಷನು ಕೃಷಿಕರಿಗೆ ಹೊರೆಯಾಗದಂತೆ ಐದನೇ ಒಂದು ಭಾಗ ತೆರಿಗೆಯನ್ನು ಕಟ್ಟಿಸಿಕೊಂಡು ಕೃಷಿ ಮಾಡಿಸಬೇಕು. ಕೃಷಿ ಕಾರ್ಯಕ್ಕೆ ಬೇಕಾದ ನದಿ ಸರೋವರ, ಕೆರೆ ಮತ್ತು ಬಾವಿಗಳಿಂದ ಯಂತ್ರಗಳ ಮೂಲಕ ನೀರಿನ್ನು ಬಳಸಿಕೊಂಡರೆ ನಾಲ್ಕನೇ ಒಂದು ಭಾಗ ತೆರಿಗೆ ಕಟ್ಟಬೇಕು. ಕೃಷಿಗೆ ಬೇಕಾದ ನೀರಿನ ಅನುಕೂಲತೆಯನ್ನು ಕಂಡು ಹೇಮಂತ ಮತ್ತು ಗ್ರೀಷ್ಮ ಕಾಲದ ಬೆಳೆಯನ್ನು ಬೆಳೆಸಬೇಕು.

**ಬೆಳೆಗಳು ಬೆಳೆಯುವ ಪರಿಸರ ಹೇಗಿರಬೇಕು :–**

- ಗಾಳಿಯಿಂದ ನೀರಿನ ಹನಿಗಳು ಬೀಳುವ ಪ್ರದೇಶದಲ್ಲಿ ಕುಂಬಳ ಬಳ್ಳಿಗಳನ್ನು ಬೆಳೆಯಬೇಕು.
- ಬಾವಿಯ ಸಮೀಪದಲ್ಲಿ ಬೆಳೆಯುವ ಬೆಳೆಗಳೆಂದರೆ, ಪಿಪ್ಪಿಲಿ, ದ್ರಾಕ್ಷಿ ಮತ್ತು ಕಬ್ಬುಗಳು.
- ಸರೋವರ ಕೆರೆಗಳು ಬತ್ತಿ ಒದ್ದೆಯಾಗಿರುವ ಪ್ರದೇಶದಲ್ಲಿ ಬೆಳೆಯುವ ಬೆಳೆಗಳೆಂದರೆ ತರಕಾರಿ, ಗಡ್ಡೆ, ಗೆಣಸುಗಳು.
- ಹಸಿರು ಸಸ್ಯಗಳಲ್ಲಿ ಬೆಳೆಯುವ ಬೆಳೆಗಳೆಂದರೆ ಲಶುನ ಔಷಧಗಳು ಲಾವಂಚ, ಹ್ರೀಬೇರ, ಪಿಂಡಾಲುಕ ಈ ಔಷಧಿಗಳನ್ನು ಚೆನ್ನಾಗಿ ನೀರಿನ ಅನುಕೂಲತೆ ಇರುವ ಸ್ಥಳದಲ್ಲಿ ಬೆಳೆಸಲಾಗುತ್ತದೆ.

**ಧಾನ್ಯದ ಬೀಜಗಳನ್ನು ತಯಾರಿಸುವ ಕ್ರಮ :–** ಮಾಡಬೇಕು. ಐದು ಅಥವಾ ಮೂರು ಬಿಸಿಲಿಗೆ

ಬೀಜಗಳನ್ನು ಏಳು ಬಿಸಿಲಿಗೆ ಹಾಕಿ ಏಳು ರಾತ್ರಿ ಹನಿ ತಾಗುವಂತೆ ಮಾಡಬೇಕು. ಕಬ್ಬೇ ಮೊದಲಾದ ಕಾಂಡ ಬೀಜಗಳ ತುಂಡು ಮಾಡಿದ ಸ್ಥಳಕ್ಕೆ ಸೆಗಣಿಯಿಂದ ಹೆಸರು ಉದ್ದು ಬೀಜಗಳನ್ನು ಹನಿ ಹಾಕಬೇಕು. ಕಬ್ಬೇ ಮೊದಲಾದ ಕಾಂಡ ಬೀಜಗಳ ತುಂಡು ಮಾಡಿದ ಸ್ಥಳಕ್ಕೆ ಸೆಗಣಿಯಿಂದ ಕೂಡಿದ ಜೇನುತುಪ್ಪ, ಹಂದಿಯ ವಸೆಯನ್ನು ಲೇಪಿಸಬೇಕು. ಮಾವು ಹಲಸು ಮೊದಲಾದ ಹಣ್ಣಿನ ಮರಗಳ ಗಿಡಗಳನ್ನು ನೆಡುವ ಹೊಂಡವನ್ನು ಸುಟ್ಟು ನಂತರ ನೆಡಬೇಕು. ಎಲುಬಿನ ಪುಡಿ ಮತ್ತು ದನಗಳ ಮಲಮೂತ್ರಗಳ ಗೊಬ್ಬರಗಳನ್ನು ಹಾಕಬೇಕು. ಬೀಜಗಳು ಮೊಳಕೆ ಬಂದ ನಂತರ ಸಮುಂತದುಗ್ಧವೆಂಬ ಔಷಧದ ಹಾಲನ್ನು ಮತ್ತು ಹಸಿ ಕ್ಷುದ್ರ ಮೀನಿನ ನೀರನ್ನು ಸುತ್ತಲೂ ಹಾಕಬೇಕು. ಇದರಿಂದ ಯಾವುದೇ ರೀತಿಯ ಕ್ರಿಮಿಕೀಟಗಳು ಬಾರದೆ ಹೋಗುತ್ತವೆ. ಈ ಎಲ್ಲಾ ಬೀಜಗಳನ್ನು ಬಿತ್ತುವಾಗ ಸುವರ್ಣದಿಂದ ಕೂಡಿದ ನೀರಿನಿಂದ ಒದ್ದೆಮಾಡಿ ಈ ಮಂತ್ರವನ್ನು ಹೇಳುತ್ತಾ ಮೊದಲು ಬೀಜವನ್ನು ಬಿತ್ತಬೇಕು.

"ಪ್ರಜಾಪತಯೇ ಕಶ್ಯಪಾಯ ದೇವಾಯ ನಮಃ ಸದಾ। ಸಿತಾ ಮೇ ಋದ್ಧ್ಯ ತಾಂದೇವೀ ಬೀಜೇ ಚ ಧನೇಷು ಚ॥

ಒಟ್ಟಾರೆಯಾಗಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೃಷಿಯು ಮನುಷ್ಯನ ಜೀವನಕ್ಕೆ ಅತೀ ಮುಖ್ಯವಾದ ಕಾರ್ಯ. ಮಾನವನು ಜೀವಿಸಬೇಕಾದರೆ ಕೃಷಿ ಪಾತ್ರ ಮುಖ್ಯವಾಗಿದೆ. ಕೃಷಿಯ ಕಾರ್ಯಕ್ಕೆ ರೀತಿ ಬೆಳೆಗಳು ಬೆಳೆಯಬಹುದು. ಯಾವ ಕಾಲಕ್ಕೆ ಬೆಳೆ ಬೀಜಗಳ ಬಿತ್ತನೆಯಾಗಬೇಕು. ಬೀಜಗಳ ಉತ್ಪತ್ತಿ ಹೇಗಿರಬೇಕು. ಭೂಮಿಯ ವಾತಾವರಣ ಹೇಗಿರಬೇಕು. ಎಲ್ಲಾ ಮಾಹಿತಿಯನ್ನು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದು ಕೊಳ್ಳಬಹುದು.

ಗ್ರಂಥಸೂಚಿ :

- ಕೌಟಿಲ್ಯನ ಅರ್ಥಶಾಸ್ತ್ರ, – ಕೆ. ಕೃಷ್ಣಭಟ್ಟ
- ಕೌಟಿಲ್ಯ – ಡಾ॥ ಎಂ.ವಿ. ಕೃಷ್ಣರಾವ್.
- ಸಂಸ್ಕೃತ ಸಾಹಿತ್ಯದ ಇತಿಹಾಸ – ಎಸ್. ರಾಮಚಂದ್ರ ಶಾಸ್ತ್ರಿ.
- ಸಂಸ್ಕೃತ ಕವಿ ಚರಿತ್ರೆ – ಎಮ್.ಎಸ್.ಶ್ರೀನಿವಾಸ್

***



Scanned with OKEN Scanner